**ದಿನಾಂಕಃ 18.12.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಜಿ.ಬಿ.ವಿ., ವಕೀಲರಿಂದಃ**

1 ನೇ ವಾದಿ ನನ್ನ ಅಜ್ಜಿ. ಪ್ರಕರಣ ದಾಖಲು ಮಾಡಲು ನನ್ನ ಅಜ್ಜಿ ಮಾಹಿತಿ ನೀಡಿದ್ದಾರೆ. ನನ್ನ ಅಜ್ಜಿಗೆ ವಯಸ್ಸಾದ ಕಾರಣ ಅವರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. 2 ನೇ ವಾದಿಗೆ ಕಾಲು ಪೆಟ್ಟಾಗಿದ್ದು, ಓಡಾಡಲು ಆಗದ ಕಾರಣ ಅವರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. 2 ನೇ ವಾದಿಗೆ ಕಳೆದ 3 ವರ್ಷಗಳ ಹಿಂದೆ ಕಾಲಿಗೆ ಪೆಟ್ಟಾಗಿತ್ತು. ಈ ಬಗ್ಗೆ ನಿಪಿ-1 ರಲ್ಲಿ ಹೇಳಿ ಬರೆಸಲಾಗಿದೆ. ನಿಪಿ-1 ನ್ನು ಮೂಡಿಗೆರೆಯಲ್ಲಿ ಮಾಡಿಸಲಾಗಿದೆ. ನಿಪಿ-1 ನ್ನು ಮಾಡಿಸುವ ಸಂದರ್ಭದಲ್ಲಿ ವಾದಿಗಳು ಓಡಾಡುವ ಸ್ಥಿತಿಯಲ್ಲಿ ಇದ್ದರು ಅಂದರೆ ಸರಿ. ಸಾಕ್ಷಿ ಮುಂದುವರೆದು ಅವರನ್ನು ಜೀಪ್ ಮಾಡಿಕೊಂಡು ಕರೆದುಕೊಂಡು ಹೋಗಿದ್ದೆ ಎಂದು ನುಡಿಯುತ್ತಾರೆ.

ನಿಪಿ-2 ನ್ನು ತಯಾರಿಸಲು ನನ್ನ ಅಜ್ಜಿಯೇ ಮಾಹಿತಿ ಕೊಟ್ಟಿದ್ದಾರೆ. ನಿಪಿ-2 1 ನೇ ವಾದಿ ಸಹಿ ಮಾಡಿ, ಪ್ರಮಾಣೀಕರಿಸಿ ಕೊಟ್ಟ ವಂಶವೃಕ್ಷ ಅಂದರೆ ಸರಿ. ನಿಪಿ-2 ರ ಮಾಹಿತಿ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಿಪಿ-3 ಕ್ಕು ಸಹ 1 ನೇ ವಾದಿಯೇ ಮಾಹಿತಿ ಕೊಟ್ಟಿದ್ದಾರೆ. ಅದಕ್ಕೆ 1 ನೇ ವಾದಿ ಮನೆಯಲ್ಲಿ ಕುಳಿತು ಹೇಳಿದ್ದನ್ನು ಬರೆದುಕೊಡಲಾಗಿದೆ. ನಿಪಿ-2 ನ್ನು ನೋಟರಿಯವರ ಸಮಕ್ಷಮ ವಾದಿಯೇ ಬಂದು ಮಾಡಿಸಿಕೊಂಡಿರುವ ದಾಖಲೆಯಾಗಿದೆ ಅಂದರೆ ಸರಿ. ನಿಪಿ-2 ರ ದಿನಾಂಕಃ30.07.2019 ಆಗಿದೆ. ನಿಪಿ-2 ಕ್ಕೆ 1 ನೇ ವಾದಿ ಹೆಬ್ಬೆಟ್ಟಿನ ಗುರುತು ಮಾಡಿದ್ದಾರೆ. ಯಾವುದೇ ಒಂದು ನಾಡ ಕಛೇರಿಯಲ್ಲಿ ವಂಶವೃಕ್ಷ ಮಾಡಬೇಕಾದರೆ ಛಾಪಾ ಕಾಗದದಲ್ಲಿ ಬರೆದುಕೊಡಬೇಕು ಅಂದರೆ ಸರಿ. ನಿಪಿ-2 ಮತ್ತು ಇನ್ನೊಂದು ದಾಖಲೆಯನ್ನು ಹಾಜರುಪಡಿಸಿ ನಿಪಿ-3 ರ ಪ್ರಮಾಣ ಪತ್ರ ಪಡೆಯಲಾಗಿದೆ. ಆ ಇನ್ನೊಂದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು, ನಿಪಿ-3 ನ್ನು ಪಡೆದುಕೊಳ್ಳುವ ಕಾಲಕ್ಕೆ ಒಂದು ಪ್ರಮಾಣ ಪತ್ರ ಮಾತ್ರ ಸಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ. ಹಾಗೆ ಸಲ್ಲಿಸಲಾಗಿದ್ದ ಪ್ರಮಾಣ ಪತ್ರ ನಿಪಿ-2 ಅಂದರೆ ಸರಿ.

ನಿಪಿ-2 ರಲ್ಲಿ ನಮೂದು ಮಾಡಿರುವ ಸಣ್ಣಲಿಂಗಯ್ಯ ಮತ ದುಗ್ಗಮ್ಮರವರು ನನ್ನ ಅಜ್ಜ ಮತ್ತು ಅಜ್ಜಿ. ಸದರಿಯವರುಗಳ ಹೆಸರು ನಿಪಿ-3 ರಲ್ಲಿ ಸಹ ನಮೂದಾಗಿದೆ ಅಂದರೆ ಸರಿ. ಸದರಿಯವರ ಬಗ್ಗೆ ನಾಡ ಕಛೇರಿಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾವು ಬಾಯಿ ಮಾತಿನಲ್ಲಿ ವಿವರ ನೀಡಿ ನಿಪಿ-3 ರ ದಾಖಲೆ ಪಡೆದಿದ್ದೇವೆ ಅಂದರೆ ಸರಿಯಲ್ಲ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹಿಂದೆ ಕೆ.ಇ.ಬಿ., ಮೀಟರ್ ರೀಡರ್ ಕೆಲಸ ಮಾಡುತ್ತಿದ್ದೆ ಅಂದರೆ ಸರಿ. ನನಗೆ ಕಾನೂನಿನ ಬಗ್ಗೆ

ಸ್ವಲ್ಪ ತಿಳುವಳಿಕೆ ಇದೆ ಅಂದರೆ ಸರಿ. ಯಾರಾದರು ತೀರಿಕೊಂಡಿದ್ದರೆ ಅವರ ಮರಣ ಪ್ರಮಾಣ ಪತ್ರ ಪಡೆಯಬೇಕಾದರೆ ನ್ಯಾಯಾಲಯಕ್ಕೆ ಅರ್ಜಿ ಹಾಕಿ ಪಡೆಯಬೇಕು ಅಂದರೆ ಸರಿ. ಸದರಿ ಸಣ್ಣಲಿಂಗಯ್ಯ ಮತ ದುಗ್ಗಮ್ಮರವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ನಾನು ಪ್ರಯತ್ನಿಸಿಲ್ಲ. ರಾಮಯ್ಯ ಮತ್ತು ಕಾಳುರವರು ನನ್ನ ಅಜ್ಜ ಮತ್ತು ಅಜ್ಜಿ. ಸದರಿಯವರಿಗೆ ಸಂಬಂಧಪಟ್ಟಂತೆ ಸಹ ನಾನು ಯಾವುದೇ ದಾಖಲೆಯನ್ನು ನಾಡ ಕಛೇರಿಗೆ ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ದಾಖಲೆಗಳನ್ನು ನಾಡ ಕಛೇರಿಗೆ ಹಾಜರುಪಡಿಸದೇ ಬಾಯಿ ಮಾತಿನಲ್ಲಿ ಮಾಹಿತಿ ನೀಡಿ ಹಾಗೂ ನನ್ನ ಪ್ರಭಾವ ಬೀರಿ ನಿಪಿ-3 ನ್ನು ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಬಾಯಿ ಮಾತಿನಲ್ಲಿ ಮಾಹಿತಿ ನೀಡಿ ಪಡೆದಿರುವುದಾಗಿ ನುಡಿಯುತ್ತಾರೆ. ಸೂಕ್ತ ದಾಖಲೆಯನ್ನು ನೀಡಿದರೆ ಮಾತ್ರ ನಿಪಿ-3 ರ ದಾಖಲೆಯನ್ನು ಕೊಡುತ್ತಾರೆ ಅಂದರೆ ಸರಿ. ಮರಣ ಹೊಂದಿದವರ ಮರಣ ಪ್ರಮಾಣ ಪತ್ರಗಳನ್ನು ಪಡೆಯಲು ಪ್ರತ್ಯೇಕ ಮಾರ್ಗ ಇದೆ ಅಂದರೆ ಸರಿ. ನಿಪಿ-2 ಮತ್ತು 3 ನ್ನು ಪ್ರಕರಣಕ್ಕೋಸ್ಕರ ಮಾಡಿಸಿಕೊಂಡ ದಾಖಲೆಗಳು ಅಂದರೆ ಸರಿಯಲ್ಲ.

ಬೋಬಯ್ಯ ಮತ್ತು ಮರಿಯ್ಯ ನನ್ನ ಅಜ್ಜ. ಚಂದ್ರಿ ನನ್ನ ಅಜ್ಜಿ. ಚಂದ್ರಿರವರ ಹೆಸರು ನಿಪಿ-3 ರಲ್ಲಿ ಇಲ್ಲ ಅಂದರೆ ಸರಿ. ನಿಪಿ-2 ನ್ನು ನಾಡ ಕಛೇರಿಗೆ ಕೊಟ್ಟಿದ್ದರೆ ಆ ಪ್ರಕಾರವಾಗಿ ನಿಪಿ-3 ನ್ನು ನೀಡುತ್ತಿದ್ದರು ಅಂದರೆ ಸರಿ. ಬೋಬಯ್ಯನವರ ಆಧಾರ್ ಕಾರ್ಡನ್ನು ನಾಡ ಕಛೇರಿಗೆ ಹಾಜರುಪಡಿಸಲಾಗಿತ್ತು. ಅವರು ಸಾಯುವ ಮುನ್ನ ನನಗೆ ಅವರ ಆಧಾರ್ ಕಾರ್ಡ್ ಸಿಕ್ಕಿತ್ತು. ಬೋಬಯ್ಯರವರು 2015 ರಲ್ಲಿ ಮರಣ ಹೊಂದಿದ್ದಾರೆ. ಈ ಬಗ್ಗೆ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಬೋಬಯ್ಯರವರು ಮರಣ ಹೊಂದಿರುವ ವಿಷಯವನ್ನು ನಾಡ ಕಛೇರಿಯಲ್ಲಿ ತಿಳಿಸಲಾಗಿಲ್ಲ. ಬೋಬಯ್ಯರವರ ಆಧಾರ್ ಕಾರ್ಡ್ ಹಾಜರುಪಡಿಸಲು ಸ್ವಲ್ಪ ಸಮಯ ಬೇಕು. ಶೇಷಿ ನನ್ನ ಅಜ್ಜಿ. ಶೇಷಿರವರು ಈಗ ಮರಣ ಹೊಂದಿದ್ದಾರೆ. ಅವರಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ. ಶೇಷಿರವರ ಯಾವುದೇ ದಾಖಲೆಗಳನ್ನು ನಾಡ ಕಛೇರಿಗೆ ಕೊಟ್ಟಿಲ್ಲ. ರಾಮಯ್ಯ ಮತ್ತು ಕಾಳರವರು ತೀರಿಕೊಂಡು ಸುಮಾರು 30 ವರ್ಷ ಆಗಿದೆ. ಅವರಿಬ್ಬರ ಮರಣ ಪ್ರಮಾಣ ಪತ್ರ ನನ್ನ ಬಳಿ ಇಲ್ಲ. ನಿಪಿ-2 ಮತ್ತು 3 ನ್ನು ಹೊರತುಪಡಿಸಿ ರಾಮಯ್ಯ, ಕಾಳಿ, ಸಣ್ಣಲಿಂಗಯ್ಯ ಮತ್ತು ದುಗ್ಗಮ್ಮರವರು ಇದ್ದ ಬಗ್ಗೆ ಬೇರೆ ಯಾವುದೇ ದಾಖಲೆಗಳು ಇಲ್ಲ ಅಂದರೆ ಸರಿ.

ನಿಪಿ-2 ರಲ್ಲಿ ಇರುವ ಸಣ್ಣಲಿಂಗಯ್ಯ ಹಾಗೂ ದುಗ್ಗಮ್ಮರವರ ಹೆಸರು ನಿಪಿ-3 ರಲ್ಲಿ ಇಲ್ಲ ಅಂದರೆ ಸರಿ. ರಾಮಯ್ಯರವರ ಪತ್ನಿಯ ಹೆಸರು ಕಾಳಿ. ನಿಪಿ-3 ರಲ್ಲಿ ರಾಮಯ್ಯರವರ ಪತ್ನಿಯ ಹೆಸರು ಗಂಗಮ್ಮ ಎಂದು ಇದೆ ಅಂದರೆ ಸಾಕ್ಷಿಯು ತಪ್ಪಾಗಿದೆ ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಸಣ್ಣಲಿಂಗಯ್ಯರವರ

ಪತ್ನಿಯ ಹೆಸರು ದುಗ್ಗಮ್ಮ ಎಂದು ಇಲ್ಲಾ ಅಂದರೆ ಸರಿಯಲ್ಲ. ಮರಸಣಿಗೆ ಗ್ರಾಮದ ಸರ್ವೆ ನಂ. 206 ರಲ್ಲಿ ಒಟ್ಟು 3 ಎಕರೆ 10 ಗುಂಟೆ ಜಮೀನು ಇದೆ. ಸದರಿ ಜಮೀನಿನ ಪ್ರತಿ ವರ್ಷದ ಆರ್.ಟಿ.ಸಿ., ಹಾಜರುಪಡಿಸಲು ತೊಂದರೆ ಇಲ್ಲ. ರಾಮಯ್ಯನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ತಿಳಿದಿದ್ದು, ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನಾನೇ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಯ ಪ್ರಕಾರ ರಾಮಯ್ಯನವರ ತಂದೆ ಮತ್ತು ತಾಯಿಯ ಹೆಸರು ಏನು ಇದೆ ಎಂದು ನನಗೆ ಈಗ ನೆನಪಿಲ್ಲ. ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಲಾಗಿದೆ. ಯಾವುದೇ ಡಿಕ್ಲರೇಷನ್ ಅರ್ಜಿ ಸಲ್ಲಿಸುವಾಗ ವಂಶ ವೃಕ್ಷವನ್ನು ಹಾಜರುಪಡಿಸುತ್ತಾರೆ ಅಂದರೆ ಸರಿ. ನಮೂನೆ 7 ರ ಅರ್ಜಿಯನ್ನು ಸಲ್ಲಿಸುವಾಗ ಕುಟುಂಬ ಸದಸ್ಯರ ವಿವರನ್ನು ನಮೂದು ಮಾಡಿರುತ್ತಾರೆ ಅಂದರೆ ಸರಿ.

ನಿಪಿ-11 ರಲ್ಲಿ ಸ್ವಯಂ ಶೇಷಿ, ಮೈನರ್ ಮಕ್ಕಳು ಒಂದು, ಮದುವೆಯಾಗದ ಮಕ್ಕಳು ಒಂದು ಎಂದು ನಮೂದಾಗಿದೆ ಅಂದರೆ ಸರಿ. ನಿಪಿ-11 ರಲ್ಲಿ ಮರಿಯಯ್ಯ ಮತ್ತು ಅವರ ತಂಗಿಯ ಹೆಸರು ಇಲ್ಲ ಅಂದರೆ ಸಾಕ್ಷಿಯು ಅವರು ವಿಭಾಗವಾಗಿದ್ದರು ಎಂದು ನುಡಿಯುತ್ತಾರೆ. ಸದರಿಯವರು ವಿಭಾಗವಾಗಿದ್ದ ವಿಷಯ ನನಗೆ ಮತ್ತು ವಾದಿಗಳಿಗೆ ಗೊತ್ತಿತ್ತು ಅಂದರೆ ಸರಿ. ಆ ರೀತಿ ವಿಭಾಗ ಆಗಿರುವ ಬಗ್ಗೆ ಪ್ರಸ್ತುತ ದಾವೆಯಲ್ಲಿ ಹೇಳಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-xxx

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.